<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

**S.C. No. 49/2024**

| ಸಾಕ್ಷಿಯ ಹೆಸರು | ಶ್ರೀ. ಮಹದೇವಯ್ಯ | ಚಾಸಾಃ | ಪ್ರಾಸಾಃ |
|---|---|---|---|
| ತಂದೆಯ ಹೆಸರು | ಶಿವಪ್ಪ | 5 | 2 |
| ವಯಸ್ಸು | 54 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **12.06.2026.** | |
| ಉದ್ಯೋಗ | ಎ.ಎಸ್.ಐ., ಚನ್ನಪಟ್ಟನ ಟೌನ್ ಠಾಣೆ | | |
| ವಾಸ ಸ್ಥಳ | ರಾಮನಗರ | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನಾನು 2015 ರಿಂದ 2020 ರವರೆಗೆ ಬ್ಯಾಡರಹಳ್ಳಿ ಪೋಲೀಸ್ ಠಾಣೆಯಲ್ಲಿ HC -213 ಆಗಿ ಕೆಲಸ ನಿರ್ವಹಿಸಿದ್ದೇನೆ. ದಿನಾಂಕ 26.05.2019 ರಂದು ನಾನು ರಾತ್ರಿ ಪಾಳದ ಕರ್ತವ್ಯದಲ್ಲಿ ಇದ್ದಾಗ ASI ಶಿವಣ್ಣ ರವರು ರಾತ್ರಿ ಗಸ್ತಿನಲ್ಲಿ ಇದ್ದು ದಿನಾಂಕ 27.05.2019 ರಂದು ಬೆಳಗಿನ ಜಾವ 4.30 ಗಂಟೆ ಸಮಯದಲ್ಲಿ ನನ್ನನ್ನು ಠಾಣೆಗೆ ಬರಮಾಡಿಕೊಂಡಿದ್ದು ತಿಗಳರಪಾಳ್ಯ, ಮಂಜುಶ್ರೀ ಗಾರ್ಮೆಂಟ್ಸ ನ ಬಳಿ ಯಾರೋ 5 ಹುಡುಗರು ಕೈಯಲ್ಲಿ ಮಾರಕಾಸ್ತ್ರಗಳನ್ನು ಹಿಡಿದುಕೊಂಡು ರಸ್ತೆಯಲ್ಲಿ ನಿಂತಿದ್ದರು ದಾಳಿ ಮಾಡಬೇಕು ಎಂದು ತಿಳಿಸಿದ್ದು, ASI ಶಿವಣ್ಣ ರವರು ನನ್ನನ್ನು, ಚಾಸಾ. 4, 6 ರಿಂದ 8 ಮತ್ತು ಪಂಚರಾದ ಚಾಸಾ. 2 ಮತ್ತು 3 ರವರನ್ನು ಸರ್ಕಾರಿ ವಾಹನದಲ್ಲಿ ಬೆಳಗ್ಗೆ 5.15 ಗಂಟೆಗೆ ಮೇಲೆ ಹೇಳಿದ ಸ್ಥಳದಿಂದ ಸ್ವಲ್ಪ ದೂರದಲ್ಲಿ ಹೋಗಿ ನೋಡಲಾಗಿ ಅಲ್ಲಿ 5 ಜನರು ಇರುವುದು ಕಂಡು ಬಂತು.

2. ಬೆಳಗ್ಗೆ 5.30 ಕ್ಕೆ ನಾವು ಅವರುಗಳನ್ನು ಸುತ್ತುವರಿದು ಹಿಡಿಯಲು ಪ್ರಯತ್ನಿಸಿದ್ದು 4 ಆರೋಪಿತರು ಸಿಕ್ಕಿದ್ದು, 1 ಆರೋಪಿ ತಪ್ಪಿಸಿಕೊಂಡಿರುತ್ತಾರೆ. ಸಿಕ್ಕಬಿದ್ದ ಆರೋಪಿತರ ಹೆಸರು ಕೇಳಲಾಗಿ ಹನುಮಂತ, 2 ನೇ ಆರೋಪಿಯಾದ ತಬ್ರೇಜ್ ಪಾಷ, ನಂದನ್, ಶಹಬಾಜ್ ಪಾಷ ಎಂದು ತಿಳಿದು ಬಂದಿದ್ದು ಓಡಿ ಹೋದವರ ಹೆಸರು ದೀಪು ಎಂದು ತಿಳಿದು ಬಂತು. ನಾವು ವಶಕ್ಕೆ ಪಡೆದ ಹನುಮಂತನ ಬಳಿ ಒಂದು ಚೂರಿ, 2 ನೇ ಆರೋಪಿ ಬಳಿ ಒಂದು ಚಾಕು, ಶಹಬಾಜ್ ಪಾಷ ರವರ ಬಳಿ ಖಾರದ ಪುಡಿ ಪೊಟ್ಟಣ,

ನಂದನ್ ಬಳಿ ಒಂದು ಕ್ರಿಕೆಟ್ ಬ್ಯಾಟ್ ಇತ್ತು. ಸದರಿ ವಸ್ತುಗಳನ್ನು ಪಂಚರ ಸಮಕ್ಷಮ ಮಹಜರ್ ಜಪ್ತಿ ಮಾಡಿರುತ್ತಾರೆ. ಮ.ಮಾ. 1 ರಿಂದ 4 ಅನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಸ್ಥಳದಲ್ಲಿ ಒಂದು ದ್ವಿಚಕ್ರ ವಾಹನ ಇದ್ದು ಅದನ್ನು ವಶಕ್ಕೆ ಪಡೆದೆವು.

3. ನಂತರ ವಶಕ್ಕೆ ಪಡೆದ ಆರೋಪಿತರು ಮತ್ತು ಮಾಲಿನ ಸಮೇತಾ ಠಾಣೆಗೆ ಬೆಳಗ್ಗೆ 7.30 ಕ್ಕೆ ವಾಪಸ್ಸು ಬಂದು ASI ಶಿವಣ್ಣ ಸ್ವ ವರದಿ ತಯಾರು ಮಾಡಿ ಠಾಣಾಧಿಕಾರಿಗೆ ನಿವೇದಿಸಿಕೊಂಡಿರುತ್ತಾರೆ. ದಸ್ತಗಿರಿ ಮಾಡಿದ 2 ನೇ ಆರೋಪಿಯು ನ್ಯಾಯಾಲಯದ ಮುಂದೆ ಇದ್ದು ಅವರನ್ನು ಸಾಕ್ಷಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ. **CS** ವಕೀಲರಿಂದ :

1. ದಿನಾಂಕ 27.05.2019 ರಂದು ಬೆಳಗಿನ ಜಾವ 5.00 ಕ್ಕೆ ಠಾಣೆಗೆ ಹೋದೆ. ನನಗೆ ಯಾವುದೇ ಮಾಹಿತಿ ಬರಲಿಲ್ಲ, ನೇರವಾಗಿ ಗಮನಿಸಿದೆ. ಸ್ಥಳದಿಂದ ಠಾಣೆಯು ಸುಮಾರು 3 ಕಿ.ಮಿ. ದೂರದಲ್ಲಿ ಇದೆ. ನಾನು, ಸಿಬ್ಬಂದಿ HC 73 ಸುರೇಶ್, PC 50 / ಬಸವರಾಜು, PC 736 / ಶ್ರೀಕಾಂತ್ ಇದ್ದರು. ಸದರಿ ದಿನ PSI ನಾಗರಾಜು ರವರು ಠಾಣಾಧಿಕಾರಿಯಾಗಿದ್ದರು. ನಾನು ಕೊಟ್ಟ ಮಾಹಿತಿಯನ್ನು ಅವರು ಠಾಣಾ ದಿನಚರಿಯಲ್ಲ ನಮೂದು ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ.

2. ನಾವು ಒಟ್ಟು 5 ಜನ ಸರ್ಕಾರಿ ವಾಹನದಲ್ಲಿ ಹೋದೆವು. ಪಂಚರು ಠಾಣೆಗೆ ತಮ್ಮ ಕೆಲಸಕ್ಕೆ ಬಂದಿದ್ದರು. ಯಾವ ಕೇಸಿಗೆ ಎಂದು ನೆನಪಿಲ್ಲ. ನಮ್ಮ ಠಾಣೆಯಲ್ಲಿ ಸರಕು ಸಾಕ್ಷಿಗಳನ್ನು ಪಂಚರನ್ನಾಗಿ ಮಾಡುತ್ತೇವೆ ಎಂದರೆ ಸರಿ ಅಲ್ಲ. ಅಂಗಶೋಧನೆ ಮಾಡಿಲ್ಲ ಮತ್ತು ಮಾಡಿಕೊಂಡಿಲ್ಲ. ಸ್ಥಳದಲ್ಲಿ ಯಾವುದೇ ಸಿ.ಸಿ. ಕ್ಯಾಮಾರ ಇರಲಿಲ್ಲ. ಗಾರ್ಮೆಂಟ್ಸ ಮಾಲೀಕರನ್ನು ಸಾಕ್ಷಿ ಮಾಡಿಲ್ಲ. ಘಟನಾ ಸ್ಥಳವು ಹೆಚ್ಚು ಓಡಾಡುತ್ತಾರೆ ಎಂದರೆ ಆ ಸಮಯದಲ್ಲಿ ಓಡಾಡುವುದಿಲ್ಲ. ಮೊದಲು ಬೆಳಗ್ಗೆ 4.30 ಕ್ಕೆ ನೋಡಿ ನಂತರ 5.30 ಕ್ಕೆ ಮರಳಿ ಹೋಗಿರುತ್ತೇನೆ. ಗಾರ್ಮೆಂಟ್ಸ ನಲ್ಲಿ ಸೆಕ್ಯೂರಿಟಿಗಳು ಒಳಗೆ ಇದ್ದಿರಬಹುದು. ಯಾವ ಆರೋಪಿಯನ್ನು ಯಾವ ಸಿಬ್ಬಂದಿ ದಸ್ತಗಿರಿ ಮಾಡಿದರು ಎಂದು ಹೇಳಲು ನೆನಪಿಲ್ಲ. 2 ನೇ ಆರೋಪಿಯನ್ನು ಇದೆ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿ ಅಲ್ಲ. ಆತ ಆ ದಿನ ಯಾವ ಬಟ್ಟೆ

ಧರಿಸಿದ್ದ ಎಂದು ನೆನಪಿಲ್ಲ. ಚಾಕುವಿನ ಉದ್ದ ಅಳತೆಯ ಬಗ್ಗೆ ದೂರಿನಲ್ಲಿ ನಮೂದು ಮಾಡಿಲ್ಲ. ಮು.ಮಾ. 1 ಅನ್ನು ಈ ಪ್ರಕರಣಕ್ಕೆ ಅನುಕೂಲವಾಗುಂತೆ ಸೃಷ್ಟಿ ಮಾಡಿದ್ದೇವೆ ಎಂರದೆ ಸರಿ ಅಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ ಮತ್ತು ಆರೋಪಿತನ್ನು ದಸ್ತಗಿರಿ ಮಾಡಿಲ್ಲ ಎಂದರೆ ಸರಿ ಅಲ್ಲ.

3. ಪಂಚರನ್ನು ಕರೆದುಕೊಂಡು ಹೋಗಿಲ್ಲ, ಅಲ್ಲಿ ದಾಳಿ ಮಾಡಿಲ್ಲ, ಆರೋಪಿತನ್ನು ಮಾಲೀನ ಮತ್ತು ವಾಹನದ ಸಮೇತ ಜಪ್ತಿ ಮಾಡಿಲ್ಲ ಎಂದರೆ ಸರಿ ಅಲ್ಲ. ಆರೋಪಿ ಲಾರಿ ಚಾಲಕನಾಗಿದ್ದ ಎಂದರೆ ಗೊತ್ತಿಲ್ಲ. ಆರೋಪಿಯ ವಾಸದ ಮನೆ ಗೊತ್ತಿಲ್ಲ. ಯಾವುದೇ ದಾಳಿ ಮಾಡದೇ ಇದ್ದರೂ ಸಹ ಠಾಣೆಯಲ್ಲಿ ಎಲ್ಲಾ ದಾಖಲೆಗಳು ಸೃಷ್ಟಿ ಮಾಡಿ ಈಗ ಆರೋಪಿತನ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

<u>ಮರು ವಿಚಾರಣೆ ಇಲ್ಲ</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.